॥ ಶ್ರೀಪತಿರ್ಮಾನದೋ ನಃ ॥
॥ ಶ್ರೀಮಧ್ವವಾದಿರಾಜೌ ವಿಜಯೇತೇ ॥
॥ ಶ್ರೀಭೂತರಾಜಾಯ ನಮಃ ॥

# "ಕರುಣಾಕರ ಕರುಣಿ – ಮನನಶೀಲ ಮುನಿ ಶ್ರೀವಿಶ್ವೋತ್ತಮ ತೀರ್ಥರು."

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ॥

ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟ ಫಲಪ್ರದಾ ।
ತಥಾ ಕಲೌ ವಾದಿರಾಜ ಶ್ರೀಪಾದೋಽಭೀಷ್ಟದ ಸತಾಮ್ ॥

ಭೂತರಾಜ ನಮಸ್ತುಭ್ಯಂ ವಾದಿರಾಜ ಗುರುಪ್ರಿಯ ।
ವಿದ್ರಾವ್ಯ ಸರ್ವಭಾದಾಂ ನಃ ಸದಾ ತ್ವಂ ರಕ್ಷಣಂ ಕುರು ॥

ಕೋಲವ್ಯಾಸ ಹಯಗ್ರೀವ ಪದಕಂಜ ಮಧುವ್ರತಂ ।
ಶ್ರೀವಿಶ್ವೋತ್ತಮಯೋಗೀಂದ್ರಂ ವಂದೇಽಹಂ ವಾದಿರಾಟ್ ಪ್ರಿಯಂ ॥

ಪವಿತ್ರ ಭಾರತಭೂಮಿ ಪ್ರಸಿದ್ಧ ಕರ್ಮಭೂಮಿ. ಇದು ಸಾಧನ ಭೂಮಿಯೂ ಹೌದು. ದುಷ್ಟಶಿಕ್ಷಣ ಶಿಷ್ಟಪರಿಪಾಲನೆಗಾಗಿ ಶ್ರೀಹರಿ ಅವತರಿಸುವ ಅವತಾರಭೂಮಿ. ಆ ದೇವನಾಜ್ಞೆಯಂತೆ ದೇವಾನುದೇವತೆಗಳು, ಋಷಿಮುನಿಗಳು ವಿಶಿಷ್ಟಸಾಧನೆಗಾಗಿ ಒಂದೊಂದು ರೂಪದಿಂದ ಅವತರಿಸಿ ಸಾಧನಗೈದು, ಇತರ ಸುಜೀವಿಸಾಧಕರಿಗೂ ಸಾಧನದ ಮಾರ್ಗ ತೋರಿ ಉದ್ಧೃತರಾಗುವರು ಈ ಪುಣ್ಯಭೂಮಿಯಲ್ಲಿ. ವಾಯ್ವಾದಿ ಋಜುದೇವತೆಗಳು, ರುದ್ರಾದಿ ಇತರ ದೇವತೆಗಳೂ ಯುಗಾಂತರದಲ್ಲಿ ಅವತರಿಸಿದಂತೆ ಈ ಕಲಿಯುಗದಲ್ಲಿಯೂ ಅವತರಿಸಿ ಲೋಕೋದ್ಧಾರಗೈದಿದ್ದಾರೆ. "ತಂ ಮಧ್ವಂ ಮಾರುತಂ ಸರ್ವೇ ಪರಿವಾರತಯಾ ಸದಾ । ಸಂಸೇವಿತುಂ ಸುರಾ ಭೂಮೌ ಅವತೇರುರಿತಿ ಸ್ಫುಟಮ್॥" ಎನ್ನುವ ಪುರಾಣೋಕ್ತಿಯಂತೆ, ಶ್ರೀವಾಯುದೇವರು



ಮಧ್ವತ್ವೇನ ಅವತರಿಸಿ ಸಿದ್ಧಾಂತ ಸ್ಥಾಪನೆಗೈದು ಶಿಷ್ಟಸದಾಚಾರವನ್ನು ಜಗತ್ತಿಗೆ ನೀಡಿದ ಮೇಲೆ, ಅದನ್ನೆಲ್ಲ ಅನುಸರಿಸಿ ಸೇವಿಸಲು ದೇವಾನುದೇವತೆಗಳೇ ಈ ಧರೆಗೆ ಇಳಿದು ಬಂದರು. ಆಚಾರ್ಯ ಮಧ್ವರಿಂದ ಪ್ರವರ್ತಿತ ಅನೇಕ ಪರಂಪರೆಗಳಲ್ಲಿ ಪೀಠಾಧಿಪತಿಗಳಾಗಿ, ಸಿದ್ಧಾಂತ ಸೇವೆಗೈಯುತ್ತಾ ಶಿಷ್ಟ ಸಂಪ್ರದಾಯವನ್ನು ಮುಂದುವರಿಸಿ ಪ್ರಚುರಪಡಿಸಿ ಊರ್ಜಿತಗೊಳಿಸಿದರು. ಇದರಿಂದಾಗಿ ತತ್ವದ ಅರಿವು ಹಾಗೂ ಸದಾಚಾರದ ಶ್ರದ್ಧೆ ಸಜ್ಜನರ ಮನಸ್ಸಿನಲ್ಲಿ ಅಂಕುರಿಸಿತು. ನಿರ್ದುಷ್ಟ ಅನುಷ್ಠಾನ ಹಾಗೂ ಬೋಧನೆ ಅವರುಗಳ ತನು ತಟ್ಟಿ ಮನ ಮುಟ್ಟಿತು. ಏತಾದೃಶ ಲೋಕೋತ್ತರ ಸೇವಾಸಾಧನವನ್ನು ಸಾಧಿಸಿದ ಅನೇಕ ಪರಂಪರೆಗಳಲ್ಲಿ 'ವೇದಾಂತಗುರುಸೋದರ' ಖ್ಯಾತಿ ವಿಖ್ಯಾತ ಶ್ರೀವಿಷ್ಣುತೀರ್ಥಾಚಾರ್ಯರ ಪರಂಪರೆ ಪ್ರಸಿದ್ಧವಾದದ್ದು. ಭಾವಿಸಮೀರ ಶ್ರೀವಾದಿರಾಜರು, ಇಂದ್ರ ಪದಾರ್ಹ ಶ್ರೀವೃಂದಾವನಾಚಾರ್ಯರೇ ಮೊದಲಾದ ಮಹಿಮಾನ್ವಿತ ಮಹನೀಯರಿಂದ ವಿಜೃಂಭಿತವಾದದ್ದು ಈ ಪರಂಪರೆ. ಈ ಪರಂಪರೆಯ ಪೀಠಾಧಿಪತಿಗಳಾಗಿ ಕಳೆದ ಶತಮಾನದ ಉತ್ತರಾರ್ಧ ಹಾಗೂ ಈ ಶತಮಾನದ ಮೊನ್ನೆಯವರೆಗೂ ಮಹಿತರಾಗಿ ಮೆರೆದವರು ಶ್ರೀಶ್ರೀವಿಶ್ವೋತ್ತಮ ತೀರ್ಥ ಶ್ರೀಪಾದರು.

ಶ್ರೀವಿಶ್ವೋತ್ತಮತೀರ್ಥರು ಯತ್ಯಾಶ್ರಮ ನಿಷ್ಠೆಯ ನಿಷ್ಠಾವಂತ ಹಾಗೂ ಶಿಸ್ತಿನ ಸರದಾರ. ಸಿದ್ಧಾಂತದೀಕ್ಷಾಸಂಪನ್ನ ಸೇನಾನಿ. ಮಾನಸಿದ್ಧ ಪ್ರಮೇಯವನ್ನು ಚಿಂತನೆಗೈವ ಮನನಶೀಲಮುನಿ. ಕಾಲನಾಮಕ ಹರಿಯ ಆಣತಿಯಂತೆ ಸಾರಾಸಾರ ವಿವೇಕ, ಧರ್ಮಾಧರ್ಮದ ಸೂಕ್ಷ್ಮ ಅರಿವು, ಯತ್ಯಾಶ್ರಮದ ಶಿಸ್ತು ಪ್ರಶಸ್ತವಾಗಿ ತೋರುವದು ಶ್ರೀವಿಶ್ವೋತ್ತಮತೀರ್ಥರಲ್ಲಿ. ದೇಹದ ಸೌಷ್ಠವಕ್ಕೆ ತಕ್ಕ ಎತ್ತರದ ನಿಲುವು. ಪ್ರಸನ್ನವದನದಲ್ಲಿ ಮಿಂಚುವ ಮಂದಹಾಸ, ಅಂತಃಕರಣದ ಕಿಡಿ ಇಡಿಯಾಗಿ ಹೊರಸೂಸುವ ನೇರನೋಟ, ಭಕ್ತರ ದುಃಖ ದುಮ್ಮಾನಗಳನ್ನು ಆಲಿಸಿ ಅರಿಯುವ ತಾಳ್ಮೆ, ಸುಜನ ಭಕುತರ ಕ್ಷೇಮಕ್ಕೆ ಪ್ರಾರ್ಥಿಸುವ ಪ್ರಕಾರ, ಶ್ರೀಹರಿಗುರುಸ್ಮರಣೆಯೊಂದಿಗೆ ಸಾನುಗ್ರಹಪರಿಹಾರೋಪಾಯ ಕಲ್ಪಿಸುವ ಕಡುಕಾರುಣ್ಯದ ನುಡಿ – ಇವೆಲ್ಲ

ನಿರ್ಭರವಾಗಿ ಕಾಣಸಿಗುವದು ಭಾವಿಸಮೀರ ಶ್ರೀವಾದಿರಾಜ ಗುರುಪೀಠಾಧಿರೂಢ ಶ್ರೀವಿಶ್ವೋತ್ತಮತೀರ್ಥರಲ್ಲಿ.

ಪೂಜ್ಯಶ್ರೀಗಳವರು ಜನಿಸಿದ್ದು ಕ್ರಿ.ಶ. 1934 ಶ್ರೀಮುಖ ಸಂವತ್ಸರದ ಪುಷ್ಯ ಬಹುಳ ತ್ರಯೋದಶಿಯಂದು. ಉಡುಪಿಯ ಸಮೀಪದ ಉದ್ಯಾವರ ಗ್ರಾಮವೇ ಅವರ ಜನ್ಮಸ್ಥಳ. ಅಲ್ಲಿ ವಾಸವಾಗಿದ್ದ ಶ್ರೀಮತಿ ಕೃಷ್ಣವೇಣಿ ಮತ್ತು ಶ್ರೀಕೃಷ್ಣಾರ್ಯ ದಂಪತಿಗಳ ಮುದ್ದು ಕುವರರಾದ ಇವರ ಪೂರ್ವಾಶ್ರಮನಾಮ 'ಮಾಧವ'. ಜಾತಕರ್ಮ, ನಾಮಕರಣ, ಉಪನಯನಾದಿ ಸಂಸ್ಕಾರ ಸಂಸ್ಕೃತರಾಗಿ ಆಗಿನ ಶ್ರೀ ಸೋದೆ ಮಠದ ಪೀಠಾಧಿಪತಿಗಳಾಗಿದ್ದ ಶ್ರೀವಿಶ್ವೇಂದ್ರತೀರ್ಥ ಶ್ರೀಪಾದರ ದೃಷ್ಟಿದೃಷ್ಟರಾದರು. ಮಾಧವಾಚಾರ್ಯರಿಗೆ ತುರ್ಯಾಶ್ರಮ ನೀಡಿ ಮಧ್ವ-ಭಾವಿಮಧ್ವರ ಪರಂಪರೆಗೆ ಉತ್ತರಾಧಿಕಾರಿಗಳನ್ನಾಗಿಸಲು ಗುರುಗಳು ಇಚ್ಛಿಸಿದಾಗ ಕೃಷ್ಣಾರ್ಯ ದಂಪತಿಗಳು ಒಪ್ಪಲಿಲ್ಲ. ನಂತರ ಹಯರೂಪದ ಹಯವದನ ಸ್ವಪ್ನ ಸೂಚನೆ ಇತ್ತ. ಮುಗ್ಧ ಮಾತಾ ಪಿತೃಗಳು ಮುದ್ದು 'ಮಾಧವ'ನನ್ನು ಮಾಧವನ ಸೇವೆಗಾಗಿ ಗುರುಗಳಿಗೆ ಒಪ್ಪಿಸಿದರು. ಕ್ರಿ.ಶ. 1943 ಸ್ವಭಾನು ಸಂವತ್ಸರದ ಭಾದ್ರಪದ ಶುದ್ಧ ಚತುರ್ಥಿಯಂದು ಗುರುಗಳಾದ ಶ್ರೀಶ್ರೀವಿಶ್ವೇಂದ್ರತೀರ್ಥರು ಮಾಧವಾಚಾರ್ಯರಿಗೆ ಆಶ್ರಮ ನೀಡಿ 'ಶ್ರೀವಿಶ್ವೋತ್ತಮತೀರ್ಥ'ರೆಂದು ಹೆಸರಿಸಿ ಶಿಷ್ಯರೆಂದು ಸ್ವೀಕರಿಸಿದರು. ವಿಘ್ನೇಶನ ಚತುರ್ಥಿಯಾದ್ದರಿಂದ ಶ್ರೀಗಳವರ ಆಶ್ರಮ ಜೀವನ ನಿರ್ವಿಘ್ನವೆಂದು ಸೂಚನೆಯಾಯಿತು. ಆಶ್ರಮ ಸ್ವೀಕಾರದಿಂದ ಶ್ರೀಗಳವರ ವ್ಯಕ್ತಿತ್ವ ಪುಟಕ್ಕಿಟ್ಟ ಬಂಗಾರದಂತಾಯಿತು. ಗುರುಗಳು ಬೇಗನೆ ಹರಿಪದ ಸೇರಿದರಾದ್ದರಿಂದ, ಶ್ರೀಗಳವರು ಪ್ರಕಾಂಡ ಪಂಡಿತರೂ, ಮಹಾತಪಸ್ವಿಗಳೂ ಆದ ಕಾಣಿಯೂರು ಮಠದ ಶ್ರೀವಿದ್ಯಾಸಮುದ್ರ ತೀರ್ಥರಲ್ಲಿ ವೇದಾಂತಾದಿ ಸಕಲ ಶಾಸ್ತ್ರಗಳನ್ನು ಅಧ್ಯಯನ ಮಾಡಿದರು. ಶ್ರೀಗಳವರ ಅನಿತರಮೇಧಾಶಕ್ತಿ, ಮನನಶೀಲತೆ ಹಾಗೂ ಪ್ರತಿಭಾನ್ವಿತವರ್ಚಸ್ಸು ಮೊದಲಾದ ಗುಣಾಂಶಗಳನ್ನು ಕಂಡು ಗುರುಗಳು ಆನಂದ ತುಂದಿಲರಾದರು.



ಶಾಸ್ತ್ರಾಧ್ಯಯನ ಸಂಪನ್ನರಾದ ಪೂಜ್ಯ ಶ್ರೀಗಳವರು ಕಾಲಾನಂತರದಲ್ಲಿ ಕೃಷ್ಣಾಪುರ ಮಠದ ಶ್ರೀವಿದ್ಯಾಸಾಗರತೀರ್ಥ ಶ್ರೀಗಳವರಿಗೂ ಹಾಗೂ ಇತರರಿಗೂ ಶಾಸ್ತ್ರಪಾಠ ಹೇಳಿದರು.ಶ್ರೀಗಳವರ ಬೋಧನಾಕ್ರಮವು ಅಪ್ರತಿಮ ಹಾಗೂ ಅನ್ಯಾದೃಶ. ಪ್ರತ್ಯಕ್ಷರ ಪ್ರತಿಪದವನ್ನು ಬಿಡಿಸಿ ಭಾವಗರ್ಭಿತ ಆಕೂತಾರ್ಥವನ್ನು ಹೇಳುವದು ಅವರಿಗೆ ಕರಗತ. ಪುಂಖಾನುಪುಂಖವಾಗಿ ಪ್ರಮಾಣೋಕ್ತಿಗಳನ್ನು ಪೂರಕವಾಗಿ ಉಲ್ಲೇಖಿಸುವ ವೈಖರಿಯಂತೂ ವರ್ಣನಾನೀತ.

ಆಚಾರ್ಯ ಮಧ್ವರ ಸೋದರ ಶ್ರೀ ವಿಷ್ಣು ತೀರ್ಥಾಚಾರ್ಯರ ವಂಶಜರಾದ ಶ್ರೀಗಳವರಲ್ಲಿ ವೈರಾಗ್ಯ, ತಪಸ್ಸು, ಜ್ಞಾನ ತ್ರಿವೇಣಿ ಸಂಗಮದಂತಿವೆ. ಭಾವಿಸಮೀರ ಶ್ರೀ ವಾದಿರಾಜಗುರು ಸಾರ್ವಭೌಮರ ಪೂರ್ಣಾನುಗ್ರಹಕ್ಕೆ ಪಾತ್ರರಾದ ಗುರುಗಳು ಭಕ್ತಾನುಗ್ರಹವಾತ್ಸಲ್ಯ ಭರಿತರು. ಶ್ರೀವಾದಿರಾಜರಿಂದಲೇ ಕ್ಲಪ್ತ, ಶ್ರೀವೇದವೇದ್ಯತೀರ್ಥರಿಂದ ಸ್ವೀಕೃತ ಹಾಗೂ ಅನುಷ್ಠಿತ, ಶ್ರೀವೃಂದಾವನಾಚಾರ್ಯರೇ ಮೊದಲಾದವರಿಂದ ವಿಜೃಂಭಿತ ಸಮಪೂಜಾದಿ ಶುಭಸಂಪ್ರದಾಯವು ಪೂಜ್ಯ ಶ್ರೀಗಳವರಿಂದ ವೈಭವದ ಉತ್ತುಂಗ ಶೃಂಗಸಂಗಿಯಾಯಿತು. ಶ್ರೀಗಳವರೊಂದು ವಿಶಿಷ್ಟ ವ್ಯಕ್ತಿ. ಸಾಧುತ್ವದ, ಸಜ್ಜನಿಕೆಯ ಸಾಕಾರಮೂರ್ತಿ. ಅವರ ವ್ಯಕ್ತಿತ್ವ, ಬೂದಿ ಮುಚ್ಚಿದ ಕೆಂಡದಂತೆ. ಅಪಾರ ಜ್ಞಾನ ಸಂಪತ್ತುಳ್ಳವರಾಗಿ ವಿಶೇಷ ಜಪತಪಾದ್ಯನುಷ್ಠಾನನಿರತರಾಗಿದ್ದರೂ ಪ್ರತಿಷ್ಠೆ, ಪ್ರಚಾರ, ಪ್ರಸಿದ್ಧಿ ಹಾಗೂ ಪ್ರಶಸ್ತಿ ಮುಂತಾದುದೆಲ್ಲ ಅವರಿಗೆ ಬೇಡ. ಎಲೆ ಮರೆ ಕಾಯಿಯಂತೆ ಯತಿಗಳು ಏಕಾಂತಪ್ರಿಯರಾಗಿ ಆಶ್ರಮ ವಿಹಿತಾನುಷ್ಠಾನಪರರಾಗಿರುವುದೇ ಹಿತಕರ, ಶ್ರೀಹರಿತೋಷಕರ ಹಾಗೂ ಲೋಕಕ್ಕೆ ಕ್ಷೇಮಕರ ಎನ್ನುವ ಅಭಿಪ್ರಾಯ ಅವರದಾಗಿತ್ತು.

ಪರಂಪರೆ ಹಾಗೂ ಸಂಪ್ರದಾಯ ವಿಷಯದಲ್ಲಿ ಅವರ ವಿನಯ, ವಿನಮ್ರವರ್ತನೆ ವರ್ಣನಾತೀತ. ಆಚಾರ್ಯ ಮಧ್ವರ ಸಿದ್ಧಾಂತದೀಕ್ಷೆಯೂ ಹಾಗೆ. ಶ್ರೀವಾದಿರಾಜರ ಋಜುತ್ವಮಹಿಮಾ ಮತ್ತು ಶ್ರೀಭೂತರಾಜರ ಮಹಿಮಾ ವಿಷಯದಲ್ಲಂತೂ ಜವಾಬ್ದಾರಿಯ ಜಾಗ್ರತೆ. ಅವರೆಂದೂ ಬೇರೆ

ಪರಂಪರೆಯನ್ನು, ತತ್ಸಂಬಂಧಿ ಪ್ರಾಚೀನ ಜ್ಞಾನಿಗಳನ್ನು ಹಾಗೂ ಇತರ ಸ್ತೋತ್ತಮರನ್ನು ನಿಂದಿಸಲಿಲ್ಲ. ಪರಂಪರಾಗತ ಶಿಷ್ಟಾಚಾರವನ್ನು, ಸನ್ನಿಧಿ ಮಹಿಮೆಯನ್ನು ಶಿರಬಾಗಿ ಗೌರವಿಸಿದವರು. ಶ್ರೀಗಳವರಿಗೆ ಹರಿದಾಸರ ಸನ್ನಿಧಿಯಂತೂ ಸರ್ವಸ್ವ. ಅವರು ತೋರುತ್ತಿದ್ದ ಶ್ರದ್ಧೆ, ಗೌರವ, ಭಕ್ತಿಗಳಂತೂ ಶಬ್ದಾತೀತ. ಪುರಂದರಾದಿದಾಸವರ್ಯರ, ಮಾದನೂರಿನ ಶ್ರೀವಿಷ್ಣುತೀರ್ಥರ, ಮಂತ್ರಾಲಯ ಪ್ರಭುಗಳ, ಆದೋನಿಯ ಶ್ರೀರಘುಪ್ರೇಮತೀರ್ಥರ, ವೇಣಿಸೋಮಪುರದ ಶ್ರೀವ್ಯಾಸತತ್ವಜ್ಞರ, ಕುಂಭಕೋಣದ ಶ್ರೀವಿಜಯೀಂದ್ರರ ತಿರುಕೋಯಿಲೂರಿನ ಶ್ರೀರಘೂತ್ತಮ ತೀರ್ಥರ, ಸವಣೂರಿನ ಶ್ರೀಸತ್ಯಬೋಧರ ಸನ್ನಿಧಿಯಲ್ಲಿ ಸ್ವರೂಪ ಮಹಿಮಾನುಸಂಧಾನದಿಂದ ಸಾಷ್ಟಾಂಗವೆರಗಿ ಧನ್ಯರಾದರು.

ಅಪರಿಚಿತರನ್ನೂ ಪರಿಚಿತರೆಂಬಂತೆ ಕಾಣುವ ಅವರ ದೃಷ್ಟಿ ದರ್ಶನೀಯ. ಅವರ ಕೃಪಾದೃಷ್ಟಿಪಾತ್ರರು ಪಾಪಮುಕ್ತರೆಂಬಲ್ಲಿ ಸಂಶಯವಿಲ್ಲ. ಶ್ರೀಗಳವರ ಅನಿತರ ತಪಸ್ಸು, ದರ್ಶನ, ಉಪದೇಶ ವಿಶಿಷ್ಟ ಫಲದಾಯಕವಾದದ್ದು. ಪೂಜ್ಯರಿಗೆ ಏಕಾಂತ ಬಲು ಪ್ರೀತಿ. ಅದು ಶ್ರೀಕಾಂತನ ಅನುಗ್ರಹವನ್ನು ಕರುಣಿಸುವ ಸಿದ್ಧಾಂತ ಕೃತಿರತ್ನಗಳನ್ನು ಅವಲೋಕಿಸಿ ಮನನ ಮಾಡಲು. ಯಾವಾಗಲೂ ಗ್ರಂಥಾವಲೋಕನ, ಹಸ್ತಪ್ರತಿಗಳನ್ನು ಸಂಗ್ರಹಿಸುವ ಹಂಬಲ. ಪೂಜ್ಯ ಶ್ರೀಗಳವರಿಗೆ ಸೂತ್ರಭಾಷ್ಯ, ಯುಕ್ತಿಮಲ್ಲಿಕಾದಿ ಅನೇಕ ಗ್ರಂಥಗಳು ಹಾಗೂ ಇತರ ಪಂಕ್ತಿಗಳು ಮುಖೋದ್ಗತ. ಅವರ ವಿಮರ್ಶೆ ಹಾಗೂ ವಿವೇಚನಾತ್ಮಕ ಪಾಠ ಹೇಳುವ ಶೈಲಿಯು ಅಡೆತಡೆಯಿಲ್ಲದ್ದು ಹಾಗೂ ವಿಚಾರ ಮಂಥಕ್ಕೆ ಮಾಧ್ಯಮವಾದದ್ದು. ಶ್ರೀಗಳವರು ಶ್ರೀವಾದಿರಾಜರ ಹಾಗೂ ಇತರ ಜ್ಞಾನಿಗಳ ಅನೇಕ ಕೃತಿಗಳನ್ನು ಪ್ರಕಾಶನಗೊಳಿಸಿ ಬೆಳಕಿಗೆ ತಂದಿದ್ದಾರೆ. ಕಳೆದ ವರುಷ (2006) ಜೂನ್‌ನಲ್ಲಿ 'ಶ್ರೀಭಾವಿಸಮೀರ ಗುರುಕುಲ'ವನ್ನು ಸೋದೆಯಲ್ಲಿ ಆರಂಭಿಸಿ ಶಾಸ್ತ್ರಾಧ್ಯಯನಕ್ಕೆ ಇಂಬು ಕೊಟ್ಟಿದ್ದಾರೆ. ಶ್ರೀರಾಜರ ಋಜುತ್ವ ಮಹಿಮಾಜ್ಞಾನಸಂಪನ್ನರಾದ ವಿದ್ವಾಂಸರ ಪಡೆಯು ಸಿದ್ಧವಾಗಬೇಕೆಂಬುದು ಅವರ ಹಿರಿದಾದ ಆಶಯ. ಅದಕ್ಕೆ ಬೇಕಾಗುವ ಪ್ರತ್ಯೇಕ ಕಟ್ಟಡ ಮೊದಲಾದ ಸೌಲಭ್ಯಗಳನ್ನು ಒದಗಿಸಲು



ಪೂಜ್ಯರು ಸಂಕಲ್ಪಿಸಿದ್ದು, ತತ್ಸಂಬಂಧಿಕಾರ್ಯವು ಈಗಾಗಲೇ ಆರಂಭವಾಗಿ ಪ್ರಗತಿಯಲ್ಲಿದೆ.

ಪೂಜ್ಯ ಶ್ರೀಗಳವರದು ಸಾವಧಾನ ಮನಸ್ಸು. ಕ್ರೋಧವೆಂಬುದು ಅವರ ಕೋಶದಲ್ಲಿಯೇ ಇಲ್ಲ. ಆದ್ದರಿಂದಲೇ ಇತ್ತೀಚಿನ ಶ್ರೀವಾದಿರಾಜ ಋಜುತ್ವ ವಿರೋಧಿ ಅಟ್ಟಹಾಸವನ್ನೂ ತಾಳ್ಮೆಯಿಂದ ಸಹಿಸಿ, ಪ್ರತಿಭಟಿಸದೆ 'ಈಶ್ವರಸ್ಯೈವ ಸಂಕಲ್ಪೋ ಯಥಾಚಾಸ್ತಿ ತಥಾಭವೇತ್' ಎಂದರುಹುತ್ತ ಶ್ರೀಹರಿಗುರುಗಳನ್ನೇ ಸ್ಮರಿಸುತ್ತ ಮೊರೆಹೊಕ್ಕರು. ಶ್ರೀವಾದಿರಾಜರ ಋಜುತ್ವವನ್ನು ಶ್ರೀಗಳವರು ಕೇವಲ ಒಂದು ಮಠದ ಸ್ವತ್ತು ಎಂಬುದಾಗಿ ಪರಿಗಣಿಸಿದವರಲ್ಲ, ತತ್ತ್ವ ಎಂಬುದಾಗಿ ಅರಿತಿದ್ದರು. ಆದ್ದರಿಂದ ವಿರೋಧಿಸಿದವರನ್ನು ಪ್ರತಿಯಾಗಿ ವಿರೋಧಿಸಲಿಲ್ಲ. ತಮ್ಮ ಉಪಾಸನೆ ಜ್ಞಾನಿಸಮ್ಮತವೆಂದು ತಿಳಿದು ಅದರಂತೆ ನಡೆದುಕೊಂಡರು. ಅವರೊಬ್ಬ ಅಜಾತಶತ್ರು ಹಾಗೂ ಪರಮಕರುಣಾಮಯಿ. ಎಲ್ಲಾ ವಿಷಯಗಳನ್ನೂ ಗಾಢಚಿಂತನೆಯಿಂದ, ಆಳ ಅನಿಸಿಕೆಯಿಂದ ಮತ್ತು ಅಷ್ಟೇ ತಾಳ್ಮೆಯಿಂದ ನಿರ್ವಹಿಸುವವರು. ಅವರ ನುಡಿ ಅಮೃತಸೇಚನದಂತೆ. ಅದು ಸವಿನುಡಿ, ಹಿತನುಡಿ ದುಃಖದುಮ್ಮಾನ ದೂರ ಮಾಡುವ ಪಥ್ಯ ನುಡಿ ಹಾಗೂ ಫಲಪ್ರದ – ಇಷ್ಟನುಡಿ. ಆಶೆಯೆಂಬುದು ಅವರಿಂದ ವಿದೂರ. ಸಂಚಾರ ಅವರಿಗೆ ಸಂಚಕಾರ. ಧನಸಂಗ್ರಹಕ್ಕಾಗಿಯಂತೂ ಎಂದೂ ಸಂಚರಿಸಿದವರಲ್ಲ. ಭಕ್ತಾನುಗ್ರಹಕ್ಕಾಗಿ ಸಂಚರಿಸಿದರೂ ಯೋಜನೆಗಳ ಸಾಕಾರಕ್ಕಾಗಿ ಅಬ್ಬರದ ಪ್ರಚಾರವಿಲ್ಲ. ಎಲ್ಲದಕ್ಕೂ ಶ್ರೀರಾಜರನ್ನು ಭೂತರಾಜರನ್ನು ಪ್ರಾರ್ಥಿಸುತ್ತ ಮೊರೆಹೋಗುವದು ಅವರ ವೈಶಿಷ್ಟ್ಯ. ಅದರಿಂದಾಗಿ ದೈವಬಲ ಪೂರಕವೆಂಬಂತೆ ಇರುವಲ್ಲಿಯೇ ಎಲ್ಲ ವಿಧ ಅನುಕೂಲ. ಹೀಗಾಗಿ ಅವರ ಗುರಿ ಹೆಗ್ಗುರಿ, ಸಾಧನೆ ಶಿಖರಾಗ್ರ..

'ವಿನಯೋ ಹಿ ಭೂಷಯತಿ ಸರ್ವರಸಮ್' ಎಂಬಂತೆ ಶ್ರೀಗಳವರ ವಿನಯ ಗುಣಸಂಪನ್ನ ಸೌಜನ್ಯ ವರ್ಣನಾತೀತ. ಇದು ಶ್ರೀಹರಿಗುರು ಪ್ರೀತಿ ಮುಖೇನ ಅಲೌಕಿಕ ಮಹಿಮಾ ಸಂಪನ್ನತೆಗೆ ಕಾರಣವಾಗಿದೆ. ಇದಕ್ಕೆ ಹೊಳೆಹೊನ್ನೂರಿನ ಶ್ರೀಸತ್ಯ ಧರ್ಮತೀರ್ಥರ ಸನ್ನಿಧಿಯಲ್ಲಿಯ ಭಾಗೀರಥಿ

ಪ್ರತ್ಯಕ್ಷ, ಶ್ರೀಕೂರ್ಮದಲ್ಲಿ ಬ್ರಾಹ್ಮಣರೂಪದಿಂದ ದೇವದರ್ಶನ, ಗಂಡಕಿಯಲ್ಲಿ ಅವಗಾಹನಕ್ಕೆ ಪ್ರವಾಹ ಉತ್ಸೇಕ, ಅಲ್ಲಿಯೇ ಶ್ರೀವೇದನಿಧಿನಾಮಕ ತೇಜಸ್ವಿ ವಟುವಿನಿಂದ ಸಾಲಿಗ್ರಾಮ ಪ್ರಾಪ್ತಿ, ಚಿಪ್ಪಗಿರಿಯಲ್ಲಿ ದರ್ಶನ ಸೂಚನೆ, ಉತ್ತನೂರಿನಲ್ಲಿ ಸ್ವಪ್ನದಲ್ಲಿ ಶ್ರೀಗೋಪಾಲದಾಸರ ದರ್ಶನ, ಮಾದನೂರಿನಲ್ಲಿ ಶ್ರೀವಿಷ್ಣುತೀರ್ಥರ ವೃಂದಾವನವು ಕೈಲಾಸ ಪರ್ವದಂತೆ ಕಂಡದ್ದು, ಮಾನವಿಯಲ್ಲಿ ಮಾನವೀಶದಾಸರ ದರ್ಶನ, ಶ್ರೀಸ್ವಪ್ನವೃಂದಾವನಾಖ್ಯಾನ ಸಮಗ್ರ ಶಿಲಾಲೇಖನಕ್ಕೆ ಶ್ರೀರಾಜರ ಮತ್ತು ಶ್ರೀಭೂತರಾಜರ ದರ್ಶನ– ಸೂಚನೆ ಮುಂತಾದವುಗಳು ಜ್ವಲಂತ ನಿದರ್ಶನಗಳಾಗಿವೆ. ಈ ಗಣ ಮತ್ತು ಗಣನೆಗೆ ಸೇರುವವು ಇನ್ನೂ ನೂರಾರು.

ಪೂಜ್ಯ ಶ್ರೀಗಳವರು ಶ್ರೀಕೃಷ್ಣ ಸನ್ನಿಧಿಯಲ್ಲಿ ನಾಲ್ಕು ಪರ್ಯಾಯಗಳನ್ನು ಯಶಸ್ವಿಯಾಗಿ ಪೂರೈಸಿ 'ಯದುಕುಲ ತಿಲಕ' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಆಚಂದ್ರಾರ್ಕಸ್ಥಾಯಿ ವೃಂದಾವನಾಖ್ಯಾನ ಶಿಲಾಲೇಖನ ಮಂದಿರವನ್ನು ಸೋದೆಯಲ್ಲಿ ಶ್ರೀರಾಜರ ಪಂಚವೃಂದಾವನ ಸನ್ನಿಧಿಯ ಮುಂಭಾಗದಲ್ಲಿ ನಿರ್ಮಿಸಿ ಹಯಮೊಗದೇವನಿಗೆ ಸಮರ್ಪಿಸಿದ್ದಾರೆ. ತಮ್ಮ ಮೂರನೆಯ ಪರ್ಯಾಯಾವಧಿಯಲ್ಲಿ ಶ್ರೀ ವಾದಿರಾಜರ ಪಂಚಶತಮಾನ ಜಯಂತ್ಯುತ್ಸವವನ್ನು (1980) ಹಾಗೂ 2000 ರಲ್ಲಿ ಆರಾಧನಾಚತುಃಶತಮಾನೋತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಿ ಧನ್ಯರಾಗಿದ್ದಾರೆ. ಪ್ರತಿವರುಷ ಸೋದೆಯಲ್ಲಿ ಶ್ರೀರಮಾತ್ರಿವಿಕ್ರಮೋತ್ಸವ ಮತ್ತು ಶ್ರೀವಾದಿರಾಜರ ಆರಾಧನಾ ಮಹೋತ್ಸವವನ್ನು ಅತಿ ವಿಜೃಂಭಣೆಯಿಂದ ಅರ್ಥಪೂರ್ಣ ಆಚರಿಸಿ ಮುಂದುವರಿಸಿದರು. ಶ್ರೀಗಳವರು ತಮ್ಮ ಮಠಕ್ಕೆ ಸಂಬಂಧಿಸಿದ ಅನೇಕ ಸ್ಥಳಗಳಲ್ಲಿ ಜೀರ್ಣೋದ್ಧಾರ ಹಾಗೂ ನವೀಕರಣ ಕಾರ್ಯ ಕೈಕೊಂಡು ಪೂರೈಸಿದ್ದಾರೆ. ಸೋದೆಯಲ್ಲಿಯ ಪೂಜಾ ಮಂದಿರ ಹಾಗೂ ಶ್ರೀರಾಜರ ವೃಂದಾವನ ಸನ್ನಿಧಿ ಕಟ್ಟಡದ ನವೀಕರಣವಂತೂ ಐತಿಹಾಸಿಕವಾಗಿವೆ. ಬೀಳಗಿ, ಕೆಂಚಗಾರು, ನಾರಳ, ನಡ್ಡೆಂತಾಡಿ, ಕುಂಭಾಸಿ, ಹೂವಿನಕೆರೆಗಳಲ್ಲಿಯೂ ಜೀರ್ಣೋದ್ಧಾರ ಕಾರ್ಯ ಯಶಸ್ವಿಯಾಗಿದೆ. ಇದಲ್ಲದೆ,



ಹೂವಿನಕೆರೆಯಲ್ಲಿಯ ಗೋಶಾಲೆ, ಇನ್ನಂಜೆಯಲ್ಲಿಯ ಶಿಕ್ಷಣ ಸಂಸ್ಥೆಗಳೂ ಶ್ರೀಗಳವರ ಮಾರ್ಗದರ್ಶನದ ಆಡಳಿತದಲ್ಲಿ ಯಶಸ್ವಿಯಾಗಿವೆ.

**ಶ್ರೀಗಳವರಿಗೆ ಪಾವನತಮ ಸೋದಾ ಕ್ಷೇತ್ರವೆಂದರೆ ಸರ್ವಸ್ವ. ಚಾತುರ್ಮಾಸ್ಯಾದಿ ಪರ್ವ ಸಮಯದಲ್ಲಿ ಅಲ್ಲಿಯೇ ಇದ್ದು ವಿಶೇಷ ಅನುಷ್ಠಾನಪರರಾಗಿ ಶ್ರೀಗುರುರಾಜ –ಶ್ರೀಭೂತರಾಜಾನುಗ್ರಹ ಪಾತ್ರರಾದವರು.**

ಕಾಲನಾಮಕ ಹರಿಯ ಕರುಣಪಾತ್ರರಾದ ಶ್ರೀಗಳವರ ಸಮಯಪ್ರಜ್ಞೆ ಹಾಗೂ ಶಿಸ್ತು ಮೆಚ್ಚುವಂಥಹದು. 73 ವಸಂತಗಳನ್ನು ಕಂಡು ಬದುಕಿದ ಅವರ ಆಶ್ರಮ ಜೀವನದ ಅವಧಿಯೇ 64 ವರುಷದ್ದು. ಗುರುಗಳಾದ ಶ್ರೀವಿಶ್ವೇಂದ್ರ ತೀರ್ಥ ಶ್ರೀಪಾದರು ಶಿಷ್ಯ ಆಶ್ರಮ ನಂತರ ಬಹಳ ದಿನ ಬದುಕಲಿಲ್ಲ. ಕೇವಲ ಒಂದು ತಿಂಗಳು ಐದು ದಿನಗಳು ಮಾತ್ರ. ಅಂದಿನಿಂದ ಸುಮಾರು 63 ವರ್ಷ ಅವಧಿಯಷ್ಟು ಬೇರೊಬ್ಬರ ಸಹಾಯವಿಲ್ಲದೆ ಪೂಜಾದಿ ಕೈಂಕರ್ಯವನ್ನು ಒಬ್ಬರೇ ವಿಧಿವತ್ತಾಗಿ ಅಚ್ಚುಕಟ್ಟಾಗಿ ಸಮಯಕ್ಕನುಗುಣವಾಗಿ ನಡೆಸಿಕೊಂಡು ಬಂದರು. ಲೌಕಿಕ ನಿಮಿತ್ತದಿಂದ ಸಮಯ ಮೀರಿ ಪೂಜಾದಿಗಳನ್ನು ಹಾಗೂ ಜಪಾದಿಗಳನ್ನು ಎಂದೂ ನಿರ್ವಹಿಸಲಿಲ್ಲ. ಅದನ್ನೂ ಕೂಡ ಯಾರಿಗೂ ಉಪದ್ರವವಾಗದಂತೆ ಆಚರಿಸಿದರು. ಶಿಷ್ಯ ಭಕ್ತರ ಅನುಕೂಲವೇ ಅವರ ಗಣನೆಯಾಗಿತ್ತು. ಕಳೆದ ವರುಷ ಶಿಷ್ಯ ಸ್ವೀಕಾರದ ನಂತರವೂ ಪೂರ್ಣ ಜವಾಬ್ದಾರಿಯನ್ನು ಹಸ್ತಾಂತರಿಸಿರಲಿಲ್ಲ. ಈ ವರುಷವೂ ಸೋದೆಯಲ್ಲಿ ಒಬ್ಬರೇ ಚಾತುರ್ಮಾಸ್ಯವ್ರತನಿಷ್ಠರಾಗಿದ್ದರು. ದೈನಂದಿನ ಧಾರ್ಮಿಕ ಚಟುವಟಿಕೆಗಳು ಯಥಾಸಾಂಗ ಸಾಗಿದ್ದವು. ಶಿಷ್ಯರಾದ ಶ್ರೀಶ್ರೀವಿಶ್ವವಲ್ಲಭತೀರ್ಥರು ಉಡುಪಿಯಲ್ಲಿ ಪರ್ಯಾಯ ಪೀಠಾಧಿರೂಢ ಶ್ರೀಶ್ರೀಕೃಷ್ಣಾಪುರ ಶ್ರೀಗಳವರಿಗೆ ಪೂಜಾದಿ ಕೈಂಕರ್ಯದಲ್ಲಿ ಸಹಾಯಕರಾಗಿದ್ದರು.

ಅಂದು ಶ್ರಾವಣ ಶುಕ್ಲ ಪಂಚಮಿ, ಸ್ಥಿರವಾಸರ. ಎಂದಿನಂತೆ ಪ್ರಾತಃಸ್ನಾನಾದಿಗಳನ್ನು ಪೂರೈಸಿ ವೈಭವದಿ ಆರಾಧ್ಯ ದೇವರನ್ನು ಪೂಜಿಸಿ ಶ್ರೀರಾಜರ ಪಂಚವೃಂದಾವನ ಹಾಗೂ ಶ್ರೀಭೂತರಾಜಾದಿದೇವಸನ್ನಿಧಿಯಲ್ಲಿ ಪೂಜಾದಿಗಳನ್ನು ಸಾಂಗಗೊಳಿಸಿದರು. ನೆರೆದ 400ಕ್ಕೂ ಹೆಚ್ಚು ಜನ ಭಕ್ತರಿಗೆ

ತೀರ್ಥ ವಿತರಣೆ ಮಾಡಿದರು. ನಂತರ ಕೀರ್ತಿಶೇಷ ಶ್ರೀಗುರುಗೋವಿಂದ ವಿಠಲದಾಸರ ಆರಾಧನಾ ರಜತೋತ್ಸವವನ್ನು ಉದ್ಘಾಟಿಸಲು ರಾಜಾಂಗಣದ ವೇದಿಕೆಗೆ ಆಗಮಿಸಿದ್ದರು. ವೇದಘೋಷ – ಪ್ರಾರ್ಥನೆಯ ನಂತರ ದೀಪ ಬೆಳಗಿ ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀಗುರುಗೋವಿಂದವಿಠಲದಾಸರು ಗೈದ ಶ್ರೀರಾಜರ ಋಜುತ್ವಮಹಿಮಾ ಪ್ರಸಾರಕ ಸೇವಾಭಾಗ್ಯವನ್ನು ಉಲ್ಲೇಖಿಸುತ್ತ 'ಸರ್ವರೂ ಶ್ರೀರಾಜರ ಋಜುತ್ವಮಹಿಮಾ ಪ್ರಸಾರವನ್ನು ಜೀವನದಲ್ಲಿ ಯಾವುದಾದರೊಂದು ಪ್ರಕಾರದಿಂದ ಗೈದು ಜೀವನ ಸಾರ್ಥಕಗೊಳಿಸಬೇಕೆಂದು' ಅಪ್ಪಣೆಯಿತ್ತರು. ಅಂದಿನ ಈ ಉಪದೇಶ ಪೂಜ್ಯರ ಚರಮ ಆದೇಶದಂತಿತ್ತು. ನಂತರ ವಿದ್ವಾನ್ ಶ್ರೀಪುಷ್ಕರಪ್ರಸಾದಾಚಾರ್ಯರು ಉದ್ಬೋಧಕ ಉಪನ್ಯಾಸವನ್ನು ನೀಡಿ ಶ್ರೀರಾಜರ ಋಜುತ್ವ ಸಮರ್ಥನೆ ಗೈದರು. ಪ್ರಸನ್ನಚಿತ್ತದಿಂದ ಉಪನ್ಯಾಸವನ್ನು ಆಲಿಸುತ್ತ ಆನಂದತುಂದಿಲರಾದರು. ಅಲ್ಲಿ ನೆರೆದಿದ್ದ ಭಕ್ತ ಸ್ತೋಮವೆಲ್ಲ ಶ್ರೀವಾದಿರಾಜರ ಋಜುತ್ವ ಮಹಿಮಾ ಜ್ಞಾನ ಸಂಪನ್ನ ಸಮೂಹವೇ ಆಗಿತ್ತು. ಅಲ್ಲಿಯೇ ಒಂದೆಡೆ ಶ್ರೀಸ್ವಾಪ್ನವೃಂದಾವನಾಖ್ಯಾನ ಹವನವೂ ನಡೆದಿತ್ತು. ಮಧ್ಯಾಹ್ನದ ನಂತರವೂ ಇನ್ನೂ ಬೇರೆ ಬೇರೆ ಕಾರ್ಯಕ್ರಮಗಳು ನಿಗದಿಯಾಗಿದ್ದವು. ಭಿಕ್ಷೆ ಸ್ವೀಕರಿಸಿ, ಭಕ್ತರೆಲ್ಲರ ಪ್ರಸಾದ ಸ್ವೀಕಾರನಂತರದಲ್ಲಿ ನೂರಾರು ಭಕ್ತರಿಗೆ ಸಾನುಗ್ರಹಮಂತ್ರಾಕ್ಷತೆ ಇತ್ತು ಹರಸಿದರು. ಕೊನೆಯಲ್ಲಿ ಶ್ರೀಗುರುಗೋವಿಂದವಿಠಲದಾಸರ ಶಿಷ್ಯರಾದ ಮಂಡ್ಯದ ಶ್ರೀವರಾಹಹರಿವಿಠಲ ದಾಸರು ತಮ್ಮ ಗುರುಗಳು ಲೇಖನ ಮಾಡಿದ ಯುಕ್ತಿಮಲ್ಲಿಕಾ ಪದ್ಯಾನುವಾದ (ಭಾಗಶಃ ಮಾತ್ರ) ಪ್ರತಿಯನ್ನು ಶ್ರೀಗಳವರಿಗಿತ್ತರು. ಸ್ಥಾಲೀಪುಲಾಕನ್ಯಾಯದಂತೆ ಅವಲೋಕಿಸಿ, 'ಮುದ್ರಿಸುವ ಮೊದಲು ನಿಪ್ಪಾಣಿ ಆಚಾರ್ಯರಿಗೊಮ್ಮೆ ತೋರಿಸಿರಿ' ಎಂದು ಆಜ್ಞಾಪಿಸುತ್ತ ಮಂತ್ರಾಕ್ಷತೆ ಸಹಿತ ಆ ಪುಸ್ತಕವನ್ನು ಮರಳಿ ದಾಸರ ಕೈಗಿತ್ತರು.

**ಕೂಡಲೇ ಎರಡು ಕೈಗಳನ್ನು ಮೇಲಕ್ಕೆತ್ತಿ 'ರಾಮ, ರಾಮ, ರಾಮ' ಎಂದು ಸ್ಪಷ್ಟ ನಾಮಸ್ಮರಣೆ ಮಾಡುತ್ತ ಯಾವುದೇ ವಿಕೃತವಿಕಾರವಿಲ್ಲದೆ ಪ್ರಸನ್ನ ಮುಖಭಾವದಿಂದ ಹರಿಪಾದ ಸೇರಿದರು. ನಂತರವೂ ಆ ಪ್ರಸನ್ನ ಮುಖಭಾವ ಬಾಡಲಿಲ್ಲ. ವಿಕಾರ ಕಾಣಲಿಲ್ಲ. ಅಖಂಡ ಧ್ಯಾನನಿರತರಂತೆ ತೋರಿದರು.**



ನೆರೆದ ಜನಸ್ತೋಮ ಧಾವಿಸಿಬಂದು, ದಿವ್ಯಮೂರ್ತಿಯ ದರ್ಶನಗೈದು ಕಂಬನಿ ಸುರಿಸಿ, ಅಲೌಕಿಕ ಮಹಿಮಾಸಂಪನ್ನತೆಯನ್ನು ಕೊಂಡಾಡಿ ಧನ್ಯರಾದರು. ದೂರದೂರದಿಂದ ಬಂದ ಭಕುತ ವೃಂದ ವಂದಿಸಿ ಪಾವನವಾಯಿತು. ಶಿಷ್ಯ ಶ್ರೀಶ್ರೀವಿಶ್ವವಲ್ಲಭತೀರ್ಥರು ಉಡುಪಿಯಿಂದ ಶ್ರೀಮಠದ ಶಿಷ್ಯವೃಂದದಿಂದೊಡಗೂಡಿ ಬಂದು ಸಾಷ್ಟಾಂಗವೆರಗಿದರು. ಶಿಷ್ಯರಿಗೆ ಸರ್ವಸ್ವವನ್ನೇ ಕಳೆದುಕೊಂಡಂತಾಗಿತ್ತು. ಶೀರೂರು ಮಠದ ಶ್ರೀಗಳವರೂ ಬಂದು ಸೇರಿದರು. ಆಮೇಲೆ ವಿಧಿವತ್ತಾಗಿ ಪೂಜ್ಯ ಶ್ರೀಗಳವರ ಪಾವನ ಪಾರ್ಥಿವ ಶರೀರವನ್ನು ಮೆರವಣಿಗೆಯಲ್ಲಿ ವಾದ್ಯವೈಭವಗಳಿಂದ ಧವಲತೀರ್ಥಕ್ಕೆ ತರಲಾಯಿತು. ಅಭಿಷೇಕ ಸ್ನಾನಾದಿಗಳ ನಂತರ ಪುನಃ ಮೆರವಣಿಗೆಯಲ್ಲಿ ತ್ರಿವಿಕ್ರಮದೇವರ, ಆರಾಧ್ಯ ದೇವರ ಮತ್ತು ಶ್ರೀರಾಜರ ಪಂಚವೃಂದಾವನದ ಎದುರು ಬಂದು ಆರ್ತಿಕ್ಯಾದಿಗಳನ್ನು ಮಾಡಲಾಯಿತು. ತುಲಸೀಮಾಲಾಗಣಾಲಂಕೃತ ಶರೀರವನ್ನು ವೇದ–ಮಂತ್ರ–ಪದ–ಪದ್ಯ–ಪರಾಕುಗಳ ಘೋಷಣೆಯೊಂದಿಗೆ ಅಲ್ಲಿಯ ಒಂಭತ್ತು ವೃಂದಾವನಗಳ ಪೈಕಿ ಶ್ರೀವರಾಹತೀರ್ಥರ ವೃಂದಾವನ ಪಕ್ಕದಲ್ಲಿ ವಿದ್ಯುಕ್ತ ಭೂಗತ ಸ್ಥಾಪನೆ ಮಾಡಲಾಯಿತು.

ಎಪ್ಪತ್ಮೂರು ವಸಂತಗಳನ್ನು ಪೂರೈಸಿದ ಪೂಜ್ಯ ಶ್ರೀಗಳವರ ಬದುಕು ಅರ್ಥಪೂರ್ಣ ಹಾಗೂ ಸಾರ್ಥಕ. ಆ ಹಸನಾದ ಸಾತ್ವಿಕ ಬದುಕು ಸಾಧಕರಿಗೆಲ್ಲ ಆದರ್ಶಪ್ರಾಯ. ಅವರ ಆದರ್ಶ ಅಭಿಮಾನಾದಿಗಳಿಂದ ದೂರಾಗಿತ್ತು. ಅವರೆಂದೂ ಪ್ರಾದೇಶಿಕ ಭೇದವನ್ನು ಭಕ್ತವರ್ಗದಲ್ಲಿ ಅಭಿಮಾನಾದಿ ಅತಿರೇಕದಿಂದ ಕಾಣಲಿಲ್ಲ. ಶ್ರೀ ವಾದಿರಾಜ ಋಜುತ್ವ ಮಹಿಮಾದಲ್ಲಿ ಅಚಲಶ್ರದ್ಧಾವುಳ್ಳವರೆಲ್ಲರೂ ತಮ್ಮವರೆಂಬ ಮನೋವೈಶಾಲ್ಯ ಅವರದಾಗಿತ್ತು. ಆ ಭಕುತರೆಲ್ಲರ ಆಧ್ಯಾತ್ಮಿಕಾದಿ ತಾಪತ್ರಯ ಪರಿಹಾರಕ್ಕೆ ಹಾಗೂ ಕ್ಷೇಮಕ್ಕೆ ನಿರಂತರ ಪ್ರಾರ್ಥಿಸುತ್ತ ಪರಿಹಾರೋಪಾಯವನ್ನು ಅವರಿಗೆಲ್ಲ ನೀಡಬಲ್ಲ ಧನ್ವಂತರಿಯಾಗಿದ್ದರು. ಶ್ರೀಗಳವರಿಗೆ ಶ್ರೀಶಾನುಗ್ರಹದಿಂದ ಅನೇಕ ಕಲಾಜ್ಞಾನಕರಗತವಾಗಿತ್ತು. ವೇದಾಂತ, ಸಾಹಿತ್ಯ, ಸಂಗೀತ, ಆಯುರ್ವೇದ, ಹೋಮಿಯೋಪಥಿ, ಅಲೋಪಥಿ, ಶಿಲ್ಪ, ಯೋಗ, ಧರ್ಮಶಾಸ್ತ್ರ ಮುಂತಾದವುಗಳಲ್ಲಿ ಪ್ರಗಲ್ಭಪಾಂಡಿತ್ಯವಿತ್ತು.

ಯತೀಂದ್ರಚಂದ್ರ ಅಸ್ತಂಗತನಾದ. ತತ್ವ ಜ್ಞಾನಸೂರ್ಯ ಮರೆಯಾದ. ಶ್ರೀವಾದಿರಾಜ ಋಜುತ್ವಮಹಿಮಾಜ್ಞಾನಸಂಪನ್ನ ಸೇನಾಸೇನಾನಿ ಕಾಣದಾದ. ಸಜ್ಜನಿಕೆಯ ಮೂರ್ತ ರೂಪ ಅದೃಶ್ಯವಾಯಿತು. ಸದನುಷ್ಠಾನನಿಷ್ಠಾತ್ರ ದೂರನಾದ. ಸಿದ್ಧಾಂತದ ಸಿದ್ಧಾಂತಿ ಸಾಧನಸಾಗರದ ಫಲದಡ ಸೇರಿದ. ಶ್ರೀವಾದಿರಾಟ್‌ಪ್ರಿಯರಾದ ಶ್ರೀಗಳವರು ಶ್ರೀವಾದಿರಾಜ ಪದಕಂಜ ಮಧೂವ್ರತರಾದರು. ತಡವಾಗಿ ಬಂದ ಭಕ್ತಸ್ತೋಮ ಗದ್ಗದಕಂಠವುಳ್ಳದ್ದಾಗಿ ಸನ್ನಿಧಿಯಲ್ಲಿ ಸ್ಥಂಡಿಲಶರಣವಾಯಿತು. ಗುರುಗಳು ದೃಶ್ಯರೂಪದಿಂದ ಕಾಣದೇ ಇದ್ದರೂ ತೇಜೋರೂಪದಿಂದ ಸನ್ನಿಹಿತರಾಗಿದ್ದಾರೆ. ವ್ಯಕ್ತಿಯಾಗಿ ತೋರದಿದ್ದರೂ ಶಕ್ತಿಯಾಗಿ ಸನಿಹದಲ್ಲಿದ್ದಾರೆ. ಸ್ಮರಿಸುವ ಭಕುತರ ಮನಸಿನಲ್ಲಿ ವಾಸನಾ ರೂಪದಿಂದಲೂ ಕಾಣುತ್ತಾರೆ.

ಇನ್ನು ಪೂತಾತ್ಮ ಪೂಜ್ಯ ಶ್ರೀಗಳವರ ಪುಣ್ಯ ಸ್ಮರಣೆ ನಮ್ಮ ಉಸಿರಾಗಲಿ, ಮಹಿತ ಮಹಾತ್ಮರ ಮಹಿಮಾ ಗುಣಗಾನ ನಿತ್ಯ ಅನುಸಂಧಾನವಾಗಲಿ, ಅವರ ಸನ್ನಿಧಿ ದರ್ಶನದ ಹಂಬಲ ಬದುಕಿಗೆ ಬೆಂಬಲವಾಗಲಿ, ಸಲ್ಲಕ್ಷಣಾಂಕಿತ ರೂಪ ಚಿಂತನೆ, ತತ್ವಚಿಂತನೆಗೆ ಚಿಲುಮೆಯಾಗಲಿ; ಅವರಿತ್ತ ಉಪದೇಶ ಚರಮೋಪದೇಶವಾಗಲಿ, ಮಂತ್ರೋಪದೇಶ ಮಂತ್ರಸಿದ್ಧಿಯನೀಯಲಿ, ಮಂತ್ರಾಕ್ಷತೆ ಅಕ್ಷಯ ಫಲನೀಡಲಿ.

ಪೂಜ್ಯ ಶ್ರೀಶ್ರೀವಿಶ್ವೋತ್ಥಮತೀರ್ಥ ಶ್ರೀಪಾದರ ಕರಕಂಜಸಂಜಾತರೂ ಕಡುಕರುಣಪಾತ್ರರೂ ಸನ್ನಿಧಾನದ ಚಲಪ್ರತಿಮಾಸ್ಥಾನೀಯರೂ ಆದ ಶ್ರೀಶ್ರೀವಿಶ್ವವಲ್ಲಭತೀರ್ಥರು ನಮಗೆಲ್ಲಾ ಅನುಗ್ರಹದ ನೆಲೆಯಾಗಿ, ಸ್ಫೂರ್ತಿಯ ಸೆಲೆಯಾಗಿ, ಪ್ರೇರಕ ಶಕ್ತಿಯಾಗಿ ಚಿರಕಾಲ ಮೆರೆಯಲಿ. ಪೂಜ್ಯರಿಂದ ಶ್ರೀವಾದಿರಾಜರ ಋಜುತ್ವಮಹಿಮಾ ಪ್ರಸಾರ-ಪ್ರಚಾರಾದಿ ಕಾರ್ಯಗಳು ಊರ್ಜಿತವಾಗಿ ವಿಜೃಂಭಿಸಲಿ. ಗುರುಗಳ ಕನಸಿನ ಕೂಸಾದ "ಗುರುಕುಲ" ವು ಪೂಜ್ಯರ ಮಾರ್ಗದರ್ಶನದಲ್ಲಿ ಗುರುತರ ಸಾಧನೆಗೈಯುತ್ತಾ ಗುರಿಮುಟ್ಟಲಿ.

ಇನ್ನು ಮುಂದೆ ನಾವೆಲ್ಲಾ ಗುರುಶ್ರೀ ವಿಶ್ವೋತ್ತಮತೀರ್ಥರನ್ನು ಪೂಜ್ಯರಲ್ಲಿಯೇ ಕಾಣೋಣ.



**ಈ ಅನಿತರ ಜ್ಞಾನನಿಧಿಗೆ, ಕಡುಕರುಣೆಗೆ, ಮನನಶೀಲಮುನಿಗೆ ಇದೋ ಅನಂತಾನಂತ ಸಾಷ್ಟಾಂಗ ಪ್ರಣಾಮಗಳು.**

ಶ್ರೀವಿಶ್ವೋತ್ತಮ ಯೋಗಿವರ್ಯ
ಕರುಣಾಪೀಯೂಷಧಾರಾಂ ಖಲು ।
ತ್ವತ್ ಪಾದಾಬ್ಜನಿಷೇವಿಭಕ್ತಸುಜನ-
ಸ್ತೋಮೇ ಸದಾ ವರ್ಷಯ ॥

ತೇನ ತ್ವದ್‌ಹೃದಯಾಬ್ಜಮಂದಿರಗತೋ
ಲಕ್ಷ್ಮೀಹಯಾಸ್ಯೋ ಮುದಾ ।
ತುಷ್ಟೋ ಮೇ ಭವತು ಪ್ರಿಯೋ
ಗುಣಮಣಿಃ ಶಿಷ್ಟೇಷ್ಟದೋಽನಿಷ್ಟಹೃತ್ ॥

॥ ಪ್ರೀತೋಽಸ್ತು ಕೃಷ್ಣಪ್ರಭುಃ ॥